ಶ್ರೀ ಕೆ. ಶ್ರೀರಾಮುಲು.—ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕಿದ್ದರೆ ಅದು ಅಬ್ಸ್ಟ್ ಆಗುತ್ತದೆ.

DELAY IN ISSUE OF COFFEE REGISTRATION CERTIFICATES

63 SRI G. PUTTASWAMY (Mudigere).—Will the Minister for Revenue be pleased to state :—

(*a*) the number of applications for coffee registration certificates received during 1971—72

(*b*) the number of certificates issused during the year;

(*c*) the number of applications pending and since how long;

(*d*) the reasons for the delay?

Sri N. HUTCHAMASTHY GOWDA (Minister for Revenue).—

(*a*) 2572

(*b*) 1,827

(*c*) 23 cases relate to 1970-71. 83 cases relate to 1971-72. 659 cases since 6 months.

(*d*) Delay due to non-production of the required documents and other formalities

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ (ಈ) ಪ್ರಶ್ನೆಗೆ ಉತ್ತರವಾಗಿ ಇತರ ನಿಯಮಗಳು ಹಾಗೂ ದಾಖಲೆಗಳ ಅಗತ್ಯತೆಯಿಂದಾಗಿ ವಿಳಂಬವಾಗಿದೆ ಎಂದು ಹೇಳಿದ್ದೀರಿ, ಆ ನಿಯಮಗಳು ಹಾಗೂ ದಾಖಲೆಗಳ ಅಗತ್ಯತೆ ಯಾವುದು ಎಂಬುದನ್ನು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಗಳನ್ನು ಇಷ್ಯೂ ಮಾಡುವ ವಿಷಯದಲ್ಲಿ ಕೊಡಗು ಜಿಲ್ಲೆಯಲ್ಲಿ ಕೆಲವು ತೊಂದರೆಗಳಿವೆ. ಪಹಣಿ ಭೂಮಿಯಲ್ಲಿ ಕೆಲವು ಅನ್‌ಆಥರೈಸ್ಡ್ ಆಕ್ಯುಪೆನ್ಸಿ ಕಾಫಿ ಕಲ್ಟಿವೇಷನ್ ಮಾಡಿದ್ದಾರೆ. ಇದರಲ್ಲಿ ಅಣ್ಣ ತಮ್ಮಂದಿರು ಭಾಗದಾರರು ಯಾರು, ಅವರಿಗೆ ಎಷ್ಟು ಹಕ್ಕಿದೆ ಎಂಬುದನ್ನು ನಿಗದಿ ಮಾಡಬೇಕಾದರೆ ಪ್ರತ್ಯೇಕವಾದ ದಾಖಲೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಆ ಜಮೀನಿನಲ್ಲಿ ಎಷ್ಟು ಹಕ್ಕಿದೆ ಎಂಬುದನ್ನು ನಿಗದಿ ಮಾಡಬೇಕಾದರೆ ಪ್ರತ್ಯೇಕವಾದ ದಾಖಲೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಆ ಜಮೀನಿನಲ್ಲಿ ಎಷ್ಟು ಹಕ್ಕಿದೆ ಎಂಬುದು ನಿರ್ಧಾರ ಆಗಬೇಕು. ಆ ಭೂಮಿ ಎಷ್ಟೆಷ್ಟು ಎಕರೆ ಇದೆ ಎನ್ನುವ ಸರ್ವೆ ದಾಖಲೆಗಳು ಸರಿಯಾಗಿಲ್ಲ. ಬೌಂಡರಿ ಮಾರ್ಕ್ ಇಲ್ಲ. ಇದಕ್ಕೆ ತಕ್ಕಂಥಾ ದಾಖಲೆಗಳು ಮತ್ತು ಟಿಪ್ಪಣಿಗಳು ಇಲ್ಲ. ಇಂಥಾ ತೊಂದರೆ ಇರುವುದರಿಂದ ಅವರಿಗೆ ನಿರ್ದಿಷ್ಟವಾಗಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡುವುದಕ್ಕೆ ಸಾಧ್ಯವಾಗದೆ ನಿಧಾನವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ರೀತಿ ದಾಖಲೆಗಳು ಇಲ್ಲದೆ ಇರತಕ್ಕಂಥಾ ಅರ್ಜಿಗಳು ಎಷ್ಟಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವು ಎಷ್ಟು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಇತ್ತೀಚೆಗೆ ದಾಖಲೆಗಳು ಇಲ್ಲದೇ ಇದ್ದರೂ ಕೂಡ ಅವರಿಗೆ ಹಂಗಾಮಿಯಾಗಿ ಸರ್ಟಿಫಿಕೇಟ್‌ಗಳನ್ನು ಕೊಡಬೇಕು ಎಂದು ಹುಕುಂ ಮಾಡಿದೆ. ಮತ್ತು ಬೇಗ ಬೇಗ ಹಂಗಾಮಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಗಳನ್ನು ಕೊಟ್ಟು ಆ ಕಾಫಿ ಕಲ್ಟಿವೇಟರುಗಳು ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಬೇಕು ಎಂದು ತಿಳಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ರೀತಿ ದಾಖಲೆಗಳು ಇಲ್ಲದಿದ್ದರೆ ಅರ್ಜಿಗಳನ್ನು ಹಾಕುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿಚಾರ ನನಗೆ ಗೊತ್ತಿಲ್ಲ. ಎಲ್ಲೆಲ್ಲಿ ಅನ್ ಅಥರೈಸ್ಡ್ ಕಾಫಿ ಕಲ್ಟಿವೇಷನ್ ಮಾಡಿದ್ದಾರೆ ಅಂಥಾ ಸ್ಥಳಗಳಲ್ಲಿ ಯಾರು ಯಾರು ಎಷ್ಟು ಅನ್ ಅಥರೈಸ್ಡ್ ಕಾಫಿ ಕಲ್ಟಿವೇಷನ್ ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡು ಬೇರೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಅಧಿಕಾರಿಗಳಿಗೆ ನಾವು ತಿಳಿಸಿದ್ದೇವೆ

ಶ್ರೀ ಎಂ. ಬಿ. ರಾಮಸ್ವಾಮಿ.—ಈ ರೀತಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವುದರಲ್ಲಿ ವಿಳಂಬ ಮಾಡುವುದರಿಂದ ಆ

(ಶ್ರೀ ಎಂ ಬಿ. ರಾಮಸ್ವಾಮಿ)

ಜನಗಳಿಗೆ ತೊಂದರೆಯಾಗುತ್ತಿದೆ. ಅದರಿಂದ ದಯವಿಟ್ಟು ಅರ್ಜಿ ಬಂದ ತಕ್ಷಣ ಈ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ. ಈ ಸಂಬಂಧದಲ್ಲಿ ಮಾನ್ಯ ಸದಸ್ಯರ ಸಮಾಧಾನಕ್ಕಾಗಿ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ ಅದು ರೀತಿ ಇದೆ. ಈ ಸಂಬಂಧದಲ್ಲಿ ಕೊಡಗು ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 1708. ಸರ್ಟಿಫಿಕೇಟ್ ಕೊಟ್ಟಿರುವುದು 1069. ಚಿಕ್ಕಮಗಳೂರು ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 608. ಸರ್ಟಿಫಿಕೇಟ್ ಕೊಟ್ಟಿರುವುದು 505. ಹಾಸನ ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 220. ಸರ್ಟಿಫಿಕೇಟ್ ಕೊಟ್ಟಿರುವುದು 217. ಮೈಸೂರು ಜಿಲ್ಲೆಯಿಂದ ಬಂದಿರತಕ್ಕ ಅರ್ಜಿ 1 ಸರ್ಟಿಫಿಕೇಟ್ ಕೊಟ್ಟಿರುವುದು 1. ಬಳ್ಳಾರಿ ಜಿಲ್ಲೆಯಲ್ಲಿ 35 ಅರ್ಜಿ ಬಂದಿದ್ದು ಪೂರ್ತಿ ಅವುಗಳಿಗೆ ಸರ್ಟಿಫಿಕೇಟ್ ಕೊಟ್ಟಿದೆ. ಹಂಗಾಮಿಯಾಗಿ ಬೇಗ ಬೇಗ ಸರ್ಟಿಫೀಕೇಟ್‌ಗಳನ್ನು ಕೊಡಬೇಕು ಎಂದು ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೆ. ದಾಖಲೆಗಳು ಇಲ್ಲದೇ ಇರುವುದರಿಂದ ಸರ್ಟಿಫಿಕೇಟ್‌ಗಳನ್ನು ಕೊಡುವುದು ನಿಧಾನವಾಗಿದೆ. ಆದ್ದರಿಂದ ದಾಖಲೆಗಳನ್ನು ತೆಗೆದುಕೊಂಡು ಅದಷ್ಟು ಬೇಗ ಸರ್ಟಿಫಿಕೇಟ್‌ಗಳನ್ನು ಕೊಡಬೇಕು ಎಂದು ಸಂಬಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ.

ಶ್ರೀ ಎನ್. ಜಿ. ಹಾಲಪ್ಪ.—ಅನ್ ಅಥರೈಸ್ಡ್ ಕಲ್ಟಿವೇಷನ್ ಎಷ್ಟು ವರ್ಷಗಳಿಂದ ಆಗಿದೆ ? ಎಷ್ಟು ಎಕರೆ ಅನ್ ಅಥರೈಸ್ಡ್ ಕಲ್ಟಿವೇಷನ್ ಮಾಡಿದ್ದಾರೆ ಈ ಬಗ್ಗೆ ಪೆನಾಲ್ಟಿ ಹಾಕುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದೀರಾ ?

ಶ್ರೀ ಎನ್, ಹುಚ್ಚಮಾಸ್ತಿಗೌಡ : ಎಲ್ಲೆಲ್ಲಿ ಅನ್ ಅಥರೈಸ್ಡ್ ಅಕ್ಯುಪೆನ್ಸಿ ಕಲ್ಟಿವೇಷನ್ ಆಗಿದೆ ಎಂದು ದೂರುಗಳು ಬಂದಿವೆ ಆ ಊರಿನಲ್ಲರತಕ್ಕ ವಿಲೇಜ್ ಅಕೌಂಟೆಂಟರ ಮುಖಾಂತರ ಮತ್ತು ಸ್ಥಳೀಯ ಅಧಿಕಾರಿಗಳ ಮುಖಾಂತರ ಅಕ್ರಮ ಸಾಗುವಳಿ ಮಾಡಿರತಕ್ಕ ಜಮೀನಿನ ಅಂಕಿ ಅಂಶಗಳನ್ನು ತೆಗೆದುಕೊಂಡ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ :— ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಸಿಕ್ಕದೇ ಇರುವುದರಿಂದ ಆ ಕಾಫಿ ಬೆಳೆಗಾರರು ಕಾಫೀ ಬೀಜವನ್ನು ಕಾಫೀ ಬೋರ್ಡಿಗೆ ಒದಗಿಸುವುದಕ್ಕಾಗುವುದಿಲ್ಲ. ಈ ರೀತಿ ಕಾಫಿ ರಿಜಿಸ್ಟ್ರೇ

ಷನ್ ಸರ್ಟಿಫಿಕೇಟ್ ಅವರಿಗೆ ಸಿಕ್ಕದೇ ಇರುವುದರಿಂದ ಅವರು ಕಾಫಿಬೀಜವನ್ನು ಕಳ್ಳಸಾಗಾಣಿಕೆ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ನಷ್ಟ ಆಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅದು ಗೊತ್ತಿದೆ. ಆ ಸಂಬಂಧಪಟ್ಟ ಜಮೀನಿನ ಸರಿಯಾದ ದಾಖಲೆಗಳು ಸಿಕ್ಕದೆ ಇರುವುದರಿಂದ ಆ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವುದು ನಿಧಾನವಾಗಿದೆ. ಆದ್ದರಿಂದ ದಾಖಲೆಗಳನ್ನು ತೆಗೆದುಕೊಂಡು ಆದಷ್ಟು ಬೇಗ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

SRI G. PUTTASWAMY :- Sir, has the Hon. Revenue Minister paid surprise visit to any office to discovery cases of inordinate delay Sir ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ನಾನು ವೀರರಾಜಪೇಟೆ ತಾಲ್ಲೂಕು ಆಫೀಸಿಗೆ ಅನಿರೀಕ್ಷಿತ ಭೇಟಿ ಕೊಟ್ಟು ಎಷ್ಟು ಸರ್ಟಿಫಿಕೇಟ್‌ಗಳನ್ನು ಕೊಡುವುದು ಬಾಕಿ ಇದೆ, ಅವುಗಳನ್ನು ಕೊಡುವುದಕ್ಕೆ ಏತಕ್ಕೆ ನಿಧಾನವಾಗಿದೆ ಎಂಬುದನ್ನು ತನಿಖೆ ಮಾಡಿದ್ದೇನೆ. ಇತರ ಆಫೀಸುಗಳಿಗೂ ಕೂಡ ಆದೇಶವನ್ನು ಕೊಟ್ಟು ಆದಷ್ಟು ಬೇಗ ಬೇಗ ಈ ಸರ್ಟಿಫಿಕೇಟ್‌ಗಳನ್ನು ಕೊಡಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು :— ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY

(but not taken up)

BILL TO REGULATE THE SERVICE CONDITIONS OF GOVERNMENT SERVANTS

13. SRI B. SUBBAYYA SHETTY, (Surathkal).—

Will be Chief Minister be pleased to state :—

(*a*) whether there is any proposal before the Government to bring forth a bill before the State Legislature for regulating the recruitment, and conditions of services of